ದಿನಾಂಕಃ 22.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ನಾನು ಬಿ.ಎಸ್.ಸಿ ಪದವಿಧನಿರುತ್ತೇನೆ. ನಾನು ಕಳೆದ 22 ವರ್ಷಗಳಿಂದ ದಸ್ತುಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ಸನ್ 2012 ರಿಂದ ನನ್ನ ಮೇಲೆ ಗೋಕಾಕ ತಾಲೂಕಿನ ವಿವಿಧ ಠಾಣೆಗಳಲ್ಲಿ ಸುಮಾರು 10-15 ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುತ್ತವೆ ಎಂದರೆ ಸರಿಯಲ್ಲ. ಅದೇ ರೀತಿ ದಸ್ತುಬರಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕರಣಗಳು ಇರುತ್ತವೆ ಎಂದರೆ ಸರಿಯಲ್ಲ. ನಾನು ವಾದಿಯ ವಿನಂತಿ ಮೇರೆಗೆ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ.

ದಾವಾ ಆಸ್ತಿಗೆ ಸಂಬಂಧಿಸಿದಂತೆ ಎಷ್ಟು ಖರೀದಿ ಕರಾರ ಪತ್ರಗಳು ಆಗಿರುತ್ತವೆ ಎಂದು ನನಗೆ ಗೊತ್ತಿಲ್ಲ, ಆದರೆ ನಿಪಿ.2 ರ ಬಗ್ಗೆ ಮಾತ್ರ ಗೊತ್ತಿರುತ್ತದೆ. ಪ್ರತಿವಾದಿಯ ಮಾಹಿತಿ ಮೇರೆಗೆ ನಾನು ನಿಪಿ.2 ನ್ನು ತಯಾರಿಸಿರುತ್ತೇನೆ. ಪ್ರತಿವಾದಿಯ ಜೊತೆ ಸದಪ್ಪ ಲಗಳಿ ಮತ್ತು ಕೃಷ್ಣಪ್ಪ ಒಬ್ಬಿ ರವರು ಸಾಕ್ಷಿದಾರರಾಗಿ ಬಂದಿದ್ದರು. ಸದರಿ ನಿಪಿ.2 ನ್ನು ತಯಾರಿಸಲು ಮಾಹಿತಿಯನ್ನು ನನ್ನ ಕಛೇರಿಯಲ್ಲಿ ಪ್ರತಿವಾದಿ ಕೊಟ್ಟಿದ್ದು, ಆ ಸಮಯದಲ್ಲಿ ಆತನನ್ನು ಹೊರತುಪಡಿಸಿ ಆತನ ಕುಟುಂಬದವರು ಯಾರೂ ಬಂದಿರಲಿಲ್ಲ. ನಿಪಿ.2 ರಲ್ಲಿಯ ಅನುಬಂಧ ಆಸ್ತಿಯ ರಿ.ಸ.ನಂ.319/2 ಕ್ಷೇತ್ರ 2 ಎಕರೆ 14 ಗುಂಟೆ ಇರುತ್ತದೆ. ಸದರಿ 2 ಎಕರೆ 14 ಗುಂಟೆ ಪೂರ್ಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಖರೀದಿ ಕರಾರ ಪತ್ರ ಬರೆದಿರುತ್ತೇನೆ. ಸದರಿ ಜಮೀನಿನ ಪ್ರತಿಫಲದ ಮೊತ್ತ ರೂ.9,00,000/- ನಿಗದಿಯಾಗಿದ್ದು, ಆ ಪೈಕಿ ರೂ.7,60,000/- ಮುಂಗಡ ಹಣವನ್ನು ಪ್ರತಿವಾದಿ ಪಡೆದಿರುವ ಬಗ್ಗೆ ಬರೆಯಲಾಗಿದೆ.

ಖರೀದಿ ಕರಾರ ಪತ್ರವನ್ನು 3 ವರ್ಷ ಅವಧಿಗೆ ಬರೆಯಲು ಕಾರಣವೇನೆಂದರೆ ಸಾಕ್ಷಿಯು ವಾದಿ ಮತ್ತು ಪ್ರತಿವಾದಿಯ ಹೇಳಿಕೆಯ ಮೇರೆಗೆ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ನಿಪಿ.2 ನ್ನು ಬರೆಯುವ ಕಾಲಕ್ಕೆ ನಾನು ದಾವಾ ಆಸ್ತಿಯ ಉತಾರೆಯನ್ನು ನೋಡಿರುತ್ತೇನೆ. ದಾವಾ ಆಸ್ತಿಗಳು ಪ್ರತಿವಾದಿಗೆ ಹೇಗೆ ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ನಿಪಿ.2 ನ್ನು ತಯಾರಿಸುವ ಕಾಲಕ್ಕೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಬೋಜಾ ದಾಖಲು ಇರಲಿಲ್ಲ. ಆದ್ದರಿಂದ ನಿಪಿ.2 ರಲ್ಲಿ ಆ ಬಗ್ಗೆ ನಮೂದಿಸಿರುವುದಿಲ್ಲ.

ಸದರಿ ನಿಪಿ.2 ನ್ನು ತಯಾರಿಸುವ ಕಾಲಕ್ಕೆ ನನ್ನ ಹಾಗೂ ಸಾಕ್ಷಿದಾರರ ಸಮಕ್ಷಮದಲ್ಲಿ ವಾದಿಯು ಪ್ರತಿವಾದಿಗೆ ಮುಂಗಡ ಹಣ ರೂ.7,60,000/- ಗಳನ್ನು ಕೊಟ್ಟಿರುತ್ತಾನೆ. ಆ ಸಮಯದಲ್ಲಿ ವಾದಿ, ಪ್ರತಿವಾದಿ ಹಾಗೂ ಮೇಲೆ ಹೇಳಿದ ಸಾಕ್ಷಿದಾರರು ಹಾಗೂ ಹೊನಕುಪ್ಪಿ ಗ್ರಾಮದ ಅಲಕನೂರ ಎಂಬ ವ್ಯಕ್ತಿ ಸಹ ಹಿರಿಯನಾಗಿ ಹಾಜರಿದ್ದ. ಸದರಿ ರೂ.7,60,000/- ಗಳನ್ನು ನಗದುರೂಪದಲ್ಲಿ ಕೊಟ್ಟಿರುತ್ತಾನೆ. ಯಾವ ಮುಖಬೆಲೆಯ ಹಾಗೂ ಎಷ್ಟು ನೋಟುಗಳನ್ನು ಕೊಟ್ಟಿರುತ್ತಾರೆ ಎಂದು ನನಗೆ ನೆನಪಿಲ್ಲ.

ದಾವಾ ಆಸ್ತಿಯು ಪ್ರತಿವಾದಿಯ ಹಿರಿಯರ ಆಸ್ತಿ ಇದ್ದು, ಆತನ ಹೆಂಡತಿ ಮಕ್ಕಳ ಸಹಿ ಬೇಕಾಗುತ್ತದೆ ಎಂದು ಕೇಳಿರುತ್ತೀರಾ? ಎಂದರೆ ಸಾಕ್ಷಿಯು ಹೌದು ಎಂದು ನುಡಿದು ಖರೀದಿ ಕಾಲಕ್ಕೆ ಅವರ ಸಹಿ ಮಾಡಿಸುವುದಾಗಿ ಪ್ರತಿವಾದಿ ಹೇಳಿರುತ್ತಾನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಪ್ರತಿವಾದಿಯು ವಾದಿಗೆ ಮಾರಾಟ ಮಾಡುವ ಕುರಿತು ಪ್ರತಿವಾದಿಯ ಹೆಂಡತಿ ಮಕ್ಕಳಿಂದ ಯಾವುದೇ ಒಪ್ಪಿಗೆ ಪತ್ರ ಬರೆಸಿರುವುದಿಲ್ಲ.

ನಾನು ವಾದಿಗೆ ಸಂಬಂಧಿಸಿದ ಹಲವಾರು ಖರೀದಿ ಪತ್ರಗಳನ್ನು ಹಾಗೂ ಖರೀದಿ ಕರಾರ ಪತ್ರಗಳನ್ನು ತಯಾರಿಸಿಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ನಿಪಿ.2 ನ್ನು ಹೊರತುಪಡಿಸಿ ನಾನು ಅವರಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ತಯಾರಿಸಿಕೊಟ್ಟಿರುವುದಿಲ್ಲ. ದಿ:25.11.2018 ರಂದು ವಾದಿ ಮತ್ತು ಪ್ರತಿವಾದಿಯ ಸಹೋದರನಾದ ಬಸಪ್ಪ ರಾಯಪ್ಪ ಡೋಣಿ ರವರ ಮಧ್ಯ ಆದ ಖರೀದಿ ಕರಾರ ಪತ್ರವನ್ನು ನಾನೇ ತಯಾರಿಸಿರುತ್ತೇನೆ ಎಂದರೆ ಆ ಬಗ್ಗೆ ನನಗೆ ಈಗ ನೆನಪಿಲ್ಲ.

ಸುಮಾರು ವರ್ಷಗಳಿಂದ ನನಗೆ ವಾದಿಯ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ವಾದಿ ಬಡ್ಡಿ ವ್ಯವಹಾರ ಮಾಡುತ್ತಿದ್ದು, ಸದರಿ ತನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ಭದ್ರತೆಗಾಗಿ ನನ್ನ ಬಳಿ ಬಂದು ಸಾಕಷ್ಟು ಕಾಗದ ಪತ್ರಗಳನ್ನು ತಯಾರಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಆದ 2ನೇ ಖರೀದಿ ಕರಾರ ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ವಾದಿ ನನಗೆ ಸುಮಾರು ವರ್ಷಗಳ ಪರಿಚಯವಿದ್ದ ಕಾರಣ ನಾನು, ಸಾಕ್ಷಿದಾರರು ಹಾಗೂ ವಾದಿ ಸೇರಿಕೊಂಡು ನಿಪಿ.2 ನ್ನು ಸೃಷ್ಟಿಕೊಂಡು ನ್ಯಾಯಾಲಯದ ಮುಂದೆ ವಾದಿಗೆ ಅನುಕೂಲವಾಗುವಂತೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ